


ಧ್ವನಿ ಕೇಳುತ್ತಲೇ ಓಡಿ ಬಂದ ದ್ಯಾಮ ಮಣ್ಣಿನ ಉಂಡೆಗಳನ್ನು ನೋಡಿ 'ಅಲಾ ಇವ್ನ, ಇವತ್ತೂ ಮಾಡಿದ್ಯಾ?' ಅಂತ ಕಣ್ಣರಳಿಸಿದ. 'ಹ್ಞೂ ಮತ್ತ, ತಗೊ ತಿನ್ ಗೋಬಿ ಮಂಚೂರಿ' ಅಂತಂದು ನಾಲ್ಕು ಉಂಡಿಗಳನ್ನು ಪೇಪರ್‌ವೊಂದರಲ್ಲಿ ಹಾಕಿಕೊಟ್ಟು ತಾನೂ ಹಾಕಿಕೊಂಡ. ಇಬ್ಬರೂ ಒಬ್ಬರಿಗೊಬ್ರು ನೋಡಿ ನಗುತ್ತ ಮಣ್ಣಿನ ಉಂಡೆಗಳನ್ನು ಗೋಬಿ ತಿನ್ನುವವರಂತೆ ನಟಿಸತೊಡಗಿದರು.

ದ್ಯಾಮ, 'ಮ್‌ಮ್‌ಮ್, ಮಸ್ತ್ ಆಗ್ಯಾವಲೆ' ಅಂತಂದು ಮತ್ತೊಂದೆರಡು ಹಾಕಿಕೊಂಡ. ಭರ್ಮ, ನಿಜವಾಗಿಯೂ ತಾನು ಗೋಬಿ ತಿನ್ನುತ್ತಿದ್ದೇನೆಂದೇ ಭಾವಿಸಿಕೊಂಡು ಖುಷಿಪಟ್ಟರೂ 'ಅವು ನಿಜವಾದ ಗೋಬಿಯಾಗಿದ್ದರೆ?' ಎನ್ನುವ ಯೋಚನೆ ಸುಳಿದು ಒಂದು ಮಣ್ಣಿನ ಉಂಡೆಯನ್ನು ಲಬಕ್ಕನೆ ಬಾಯಿಗೆ ಹಾಕಿಕೊಂಡ.

'ಲೋ ಅಡ್ಯಾ್ಯಡಿ, ಮುಂಜಾನೆದ್ದು ಕೆಲಸಿಲ್ಲ ಬಗಸಿಲ್ಲ, ಮಣ್ಣಾಗ ಆಡ್ಕೊಂತ ಕುಂತಿ ಏನಲೋ ರಾಡ್ಯಾ' ಅಂತಂದು ಕೈಯಾಗ ಕಸಬರಿಗಿ ಹಿಡ್ಕೊಂಡು ಮನಿಯಿಂದ ಹೊರಾಗ ಬರಾಕತ್ತಿದ್ದ ಮಾದೇವಿಯನ್ನ ನೋಡಿದ್ ಕೂಡ್ಲೆ ದ್ಯಾಮ ಹೆದರಿ ಅಲ್ಲಿಂದ ಓಡಿ ಹೋದ. ಮಾದೇವಿಯ ಏಟಿನ ರುಚಿ ಅವನಿಗೂ ಚೆನ್ನಾಗಿ ಗೊತ್ತಿತ್ತು. ಆದ್ರ ಭರ್ಮ 'ಈಕೇನ್ ಮಾಡ್ತಾಳ ತೊಗ, ಗೋಬಿ ತಿನ್ನಾಕ ರೊಕ್ಕ ಕೊಡಲಾರದಾಕಿ ಈಗ ಗೋಬಿ ತಿನ್ನೊ ಆಟ ಆಡಿದ್ರ ಅದು ಹೆಂಗ ಹೊಡಿತಾಳ ನಾನೂ ನೋಡೆಬಿಡ್ತೀನಿ' ಅಂತಂದು ಭಂಡ ಧೈರ್ಯ ಮಾಡಿ ಅಲ್ಲೆ ಕುಂತ.

ಮಾದೇವಿ ಕಸಬರಗಿಯನ್ನು ಉಲ್ಟಾ ಹಿಡಿದು ಸುಂಕನ ಬೆನ್ನಿಗೆ ರಪ್ ಅಂತ ಹೊಡೆದು 'ಅಡಿಗಿಗಿ ನೀರಿಲ್ಲ, ಹೋಗಿ ನಳದಾಗ ಒಂದ್ ಕೊಡ ನೀರ್ ತಗೊಂಬಾ ಅಂದ್ರ ಇಲ್ಲೇನು ಕಿಸ್ಕೊಂತ ಕುಂತಿಯೋ ನಾಯಿಯಂತವನ?' ಅಂತ ಅಂದಾಕಿನ ಮತ್ತೊಂದು ಬಾರಿ ಹೊಡಿಯಾಕ ಕೈಯೆತ್ತಿದ್ಲು. ಬಿಸಿಲಿನ ಝಳ ಹೆಂಗೊ ತಡಕೊಂಡಿದ್ದ ಭರ್ಮ ಮಾದೇವಿಯ ಕಸಬರಗಿ ಏಟು ಚುರ್‌ಗುಟ್ಟತೊಡಗಿ ಬುಳು ಬುಳು ಅಂತ ಕಪಾಳದ ತುಂಬಾ ಕಣ್ಣೀರು ಉದುರಿ 'ಯವ್ವೊಲೆ ಯಪ್ಪಲೆ' ಅಂತ ನೋವಿಗೆ ಒದರಿಕೊಳ್ತಾ 'ಯಾಕ್ ಹೊಡಿದಿಬೆ? ನಿಮ್ಮೌನ, ಹಂದಿಯಂತಾಕಿ' ಅಂತ ಬೆನ್ನು ತಿಕ್ಕಿಕೊಳ್ತಾನೆ ಅಲ್ಲಿಂದ ಓಡತೊಡಗಿದ. ಹೇಳಿದ ಕೆಲಸ ಮಾಡಾದಬಿಟ್ಟು ನನಗ ಎದರ್ ಮಾತಾಡ್ತಾನಲ ಇವ ಅನ್ನುವ ಸಿಟ್ಟು ಬಂದು ನಿಂತಲ್ಲೆ ಕಸಬರಗಿಯನ್ನು ಭರ್ಮನ ಕಡೆಗೆ ಬೀಸಿ ಒಗೆದು, 'ಮನಿಗೆ ಬಾರಲೋ, ಕೂಳು ನೀರಿಲ್ಲದಂಗ ಉಪವಾಸ ಸಾಯಿಬಡಿಲಿಲ್ಲ ಅಂದ್ರ ಕೇಳ್' ಅಂತ ಅಸಹನೆಯಿಂದ ಕೂಗ್ಯಾಡಿದ್ಲು. ಬಿಸಿಲಿಗೆ ಕಾದಿದ್ದ ಮಣ್ಣಿನ್ಯಾಗ ಬರಿಗಾಲುಗಳನ್ನು ಇಡುತ್ತಲೆ ಭರ್ಮ ಅದೇನೇನೊ ಲಡ ಲಡ ಬಯ್ಕೊಳ್ತಾ ಓಡುತ್ತಲೇ ಮರೆಯಾದ.

ಭರ್ಮ ತನ್ನ ಹತ್ರ ಕೊಂಡು ತಿನ್ನಾಕ ರೊಕ್ಕ ಇಲ್ಲಾಂದ್ರೂ